SRI R. S. MANE.—What does it mean ? I do not have prejudice towards any language.

SRI RAMAKRISHNA HEGDE.—I am sorry, Mr. Mane. It is not on insinuation. I said it in the spirit of friendly advice. If you go to the border areas in Maharashtra, no Kannada speaking man would take objection to the Board being written in Marathi. They have accepted. They do not have that kind of prejudice. They say that Marathi is the administrative language. As long as they are there, they have accepted but the same spirit is not shown by my Maharashtra friends.

SRI R. S. MANE.—Because we cannot read Kannada.

MR. SPEAKER.—Next question.

ಕಾದಿರಿಸಲಾದ ಅರಣ್ಯ ಪ್ರದೇಶ

೧೩೬೪. ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ೧೯೦೫ರಲ್ಲಿ ಕೊಡಗು ಕಮಿಷನರ್ ದೇವರ ಕಾಡನ್ನು ರಕ್ಷಿತಾರಣ್ಯ ಎಂದು ಘೋಷಿಸಿದಾಗ ಇದ್ದ ದೇವರ ಕಾಡು ವಿಸ್ತೀರ್ಣವೆಷ್ಟು ? ಹಾಗೂ ೧೯೮೫ರಲ್ಲಿ ಇರುವ ಒಟ್ಟು ದೇವರ ಕಾಡು ವಿಸ್ತೀರ್ಣವೆಷ್ಟು ?

ಆ) ಈ ದೇವರ ಜಾಗವನ್ನು ರಕ್ಷಿತಾರಣ್ಯವೆಂದು ಮತ್ತು ಅಲ್ಲಿರುವ ಅರಣ್ಯ ಸಂಪತ್ತನ್ನು ನಾಶ ಮಾಡಬಾರದೆಂದು ಈ ಹಿಂದೆ ಘೋಷಣೆ ಏನಾದರೂ ಹೊರಡಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ಈ ಭಾಗದಲ್ಲಿ ಅರಣ್ಯ ಇಲಾಖೆಯವರು ಅರಣ್ಯ ಸಂಪತ್ತನ್ನು ನಾಶ ಮಾಡುತ್ತಿರುವುದು ಹಾಗೂ ಪರಿಸರಗಳನ್ನು ಕಡಿಯುತ್ತಿರುವ ಬಗ್ಗೆ ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ರೀತಿ ರಕ್ಷಿತ ಅರಣ್ಯವನ್ನು ಕಾಪಾಡಿಕೊಂಡು ಬಂದ ಹಿಂದಿನ ಸರಕಾರದ ಧೋರಣೆಯನ್ನು ಬದಲಿಸಿ ದೇವರ ಕಾಡನ್ನು ನಾಶ ಮಾಡಿ, ಕೊಡಗಿನ ಭವಿಷ್ಯಕ್ಕೆ ಹಾನಿ ತರುವ ಧೋರಣೆಯ ಉದ್ದೇಶವೇನು ?

ಉ) ಇಲ್ಲಿಯವರೆಗೆ ದೇವರ ಕಾಡಿನ ಅತಿ ಕ್ರಮಣ ಆಗಿರುವ ಕಾಡಿನ ವಿಸ್ತೀರ್ಣವೇನು ?

ಊ) ಈ ಅತಿಕ್ರಮಣದ ಬಗ್ಗೆ ಸರಕಾರದವರು ಕೈಗೆದುಕೊಂಡ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ೧೯೦೫ನೇ ಇಸವಿಯಲ್ಲಿ ಕೊಡಗಿನ ಮುಖ್ಯ ಆಯುಕ್ತರು ದೇವರ ಕಾಡುಗಳನ್ನು ಘೋಷಿಸಿದಾಗ ಇದ್ದ ವಿಸ್ತೀರ್ಣ ೪೨೨೦.೭೩೨ ಹೆಕ್ಟೇರ್ ಆಗಿದ್ದು. ೧೯೮೫ರಲ್ಲಿ ಆದರೆ ವಿಸ್ತೀರ್ಣ ೩೩೬೫.೫೭೦ ಹೆಕ್ಟೇರ್ ಆಗಿರುತ್ತದೆ.

ಆ) ಹೌದು.

ಇ) ಕೇವಲ ಬೆಳೆದ ಸತ್ತ ಮತ್ತು ಗಾಳಿಗೆ ಬಿದ್ದ ಮರಗಳನ್ನು ಮಾತ್ರ ಕಡಿಯಲಾಗಿದೆ, ಯಾಕೆಂದರೆ ಅವುಗಳನ್ನು ಹಾಗೆಯೇ ಬಿಡುವುದು ರಾಷ್ಟ್ರೀಯ ಅಪವ್ಯಯವಾಗುತ್ತದೆ. ಅಂತಹ ಮರಗಳನ್ನು ಕಡಿದು, ಸರಕಾರಿ ಮರ ಸಂಗ್ರಹಾಲಯಗಳಿಗೆ ಸಾಗಿಸಿ ೧೯೮೦-೮೫ ಮತ್ತು ೧೯೮೫-೮೬ರಲ್ಲಿ ಹರಾಜು ಮಾಡಲಾಗಿದೆ. ಇಂತಹ ಹರಾಜು ಮಾಡಿದ ಅಂದಾಜು ೧೫೮೫.೨೪೭ ಘ.ಮೀ. ಮರದ

ದಿಮ್ಮಿಗಳಿಂದ ಸುಮಾರು ೧೫ ಲಕ್ಷ ರೂ. ಆದಾಯ ಬಂದಿದೆ. ಆದರೆ ದೇವರ ಕಾಡಿನಿಂದ ಅರಣ್ಯ ಸಂಪತ್ತನ್ನು ನಾಶ ಮಾಡಿಲ್ಲ.

ಈ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅರಣ್ಯ ಇಲಾಖೆಯವರು ಕೇವಲ ಬೆಳೆದ ಸತ್ತ ಹಾಗೂ ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ಮಾತ್ರ ಕಡಿದು, ಸಾಗಿಸಲಾಗಿದೆ.

ಉ) ಸುಮಾರು ೧೫೧.೪೦ ಹೆಕ್ಟೇರ್ ದೇವರ ಕಾಡು ಜಮೀನಿನ ಅತಿಕ್ರಮಣ ಆಗಿರುತ್ತದೆ.

ಊ) ಇಲ್ಲಿಯ ತನಕ ದೇವರ ಕಾಡುಗಳು ಕಂದಾಯ ಇಲಾಖೆಯವರ ನಿಯಂತ್ರಣದಲ್ಲಿದ್ದವು. ಸರಕಾರದ ಸಂಖ್ಯೆ. ಆರ್‌ಡಿ ೧೦೪ ಎಲ್‌ಜಿಪಿ ೭೯. ದಿನಾಂಕ ೨೬-೧೦-೧೯೮೫, ಆದೇಶದ ಪ್ರಕಾರ ದೇವರ ಕಾಡುಗಳ ಆಡಳಿತವನ್ನು ಅರಣ್ಯ ಇಲಾಖೆಗೆ ವಹಿಸಿರುತ್ತಾರೆ. ಇವುಗಳನ್ನು ಅರಣ್ಯ ಇಲಾಖೆಗೆ ವಹಿಸಿರುವುದರಿಂದ ಅತಿಕ್ರಮಣಕಾರರನ್ನು ಕಾನೂನಿನಂತೆ ತೆರವು ಮಾಡಿಸಲು ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ.—ಇತ್ತೀಚೆಗೆ ದೇವರ ಕಾಡನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ; ಹಿಂದಿನಿಂದಲೂ ದೇವರ ಕಾಡನ್ನು ರಕ್ಷಣೆ ಮಾಡಿಕೊಂಡು ಬಂದಿದ್ದರು. ಈ ರೀತಿ ಅತಿಕ್ರಮಣ ಮಾಡಿಕೊಂಡಿರುವವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಅಧ್ಯಕ್ಷರೇ, ಇತ್ತೀಚೆಗೆ ದೇವರ ಕಾಡು ಅತಿಕ್ರಮಣ ಆಗಿಲ್ಲ. ೧೯೭೨ನೇ ಇಸವಿಯಿಂದ ಅತಿಕ್ರಮಣ ಆಗಿದೆ. ಈಗ ಅರಣ್ಯ ಇಲಾಖೆಯವರು ವಹಿಸಿಕೊಂಡಿರುವುದರಿಂದ, ಅವರನ್ನು ಉಚ್ಚಾಟಿಸಲಿಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಪ್ರಶ್ನೆ ೫೭೯ (೭೫೩) ಮುಂದೂಡಲಾಗಿದೆ,

ಚುಕ್ಕೆ ಪ್ರಶ್ನೆ ೫೮೦ (೧೪೮೦). (ಮಾನ್ಯ ಸದಸ್ಯರು ಹಾಜರಿಲ್ಲ)

Nursery plots available in Bijapur District under the control of Forest Department

1353. SRI V. THUNGAL (Bilagi).—Will the Minister of state for Forest be please to state.—

(a) How many nursery plots are available in Bijapur District under the control of Forest Department.

(b) Forest Department has made any programme to raise nursery plots in Jamkhandi, Bilagi and Mudhol Taluks, under Ghataprabha Irrigation area.

(c) If so, will the Forest Department prepare perspective plans in this direction ?

SRI B. A. JEEVIJAYA (Hon'ble Minister of State for Forest).—

(a) There are 33 nursery plots with the Forest Department in Bijapur District.